ಪ್ರಮಾಣಪತ್ರಕ್ಕೆ ಲಗತ್ತು

ದಿನಾಂಕ**: 04.11.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಆರ್ ಎಂ ಜಿ ವಕೀಲರಿಂದಃ-

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುತ್ತದೆ. ಈ ದಾವೆಯನ್ನು **41, 42** ಕ್ಕೆ ಸಂಬಂದಪಟ್ಟಂತೆ ಹೂಡಲಾಗಿರುತ್ತದೆ. ಸದರಿ ಸ್ವತ್ತು ಪ್ರತಿವಾದಿಗೆ ಸಂಬಂದಪಟ್ಟ ಸ್ವತ್ತಾಗಿರುತ್ತದೆ. ಸದರಿ ಸ್ವತ್ತಿನ ಚಕ್ಕುಬಂದಿ ಹೇಳಲು ನನಗೆ ಗೊತ್ತಿಲ್ಲ. ಸ್ವತ್ತಿನ ಸಂಃ**41, 42** ಕ್ಕೆ ಹಾಗೂ ನನ್ನ ಸ್ವತ್ತಿಗೂ ಸುಮಾರು ಅರ್ಧ ಕಿ.ಮೀ ಅಂತರ ಇರುತ್ತದೆ. ಸದರಿ ಸ್ವತ್ತಿನ ಅಕ್ಕ-ಪಕ್ಕ ನನ್ನದು ಯಾವುದೇ ಸ್ವತ್ತು ಇರುವುದಿಲ್ಲ. ಊರಿನಲ್ಲಿ ಇರುವ ರಸ್ತೆಗಳು ಅಳತೆ ಸಮಯದಲ್ಲಿ ನಾನು ಹಾಜರು ಇರುವುದಿಲ್ಲ. ದಾರಿಗಳು ಎಷ್ಟು ಅಡಿ ಇದೆ ಎಂದು ನನಗೆ ನಿಖರವಾಗಿ ತಿಳಿದಿಲ್ಲ. ರಸ್ತೆಯನ್ನು ಅಳತೆ ಮಾಡಲು ಬಂದಾಗ ನಾನು ಹೋಗಿರುವುದಿಲ್ಲ. ದಾವಾ ಸ್ವತ್ತಿನಲ್ಲಿ **8** ಅಡಿ ರಸ್ತೆ ಮಾತ್ರ ಇರುತ್ತದೆ **12** ಅಡಿ ಇರುವುದಿಲ್ಲ ಎಂದು ವರದಿಯನ್ನು ಸಲ್ಲಿಸಲಾಗಿರುತ್ತದೆಂದರೆ ನನಗೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ನಾನು **12** ಅಡಿ ದಾರಿ ಇದೆ ಎಂದು ಬರೆಸಿರುತ್ತೇನೆ. ಸದರಿ **12** ಅಡಿ ರಸ್ತೆ ವಾದಿಯ ಮನೆಯಿಂದ **300** ಮೀಟರ್ ದೂರ ಇರುತ್ತದೆ. ವಾದಿಯ ಸ್ವತ್ತಿನ ಚಕ್ಕುಬಂದಿ ನನಗೆ ತಿಳಿದಿಲ್ಲ.

**2.** ರಸ್ತೆಗೆ ಸಂಬಂದಪಟ್ಟ ದಾಖಲೆಗಳನ್ನು ನಾನು **2015** ರಲ್ಲಿ ನೋಡಿರುತ್ತೇನೆ. ಯಾವ ದಾಖಲೆ ಮುಖಾಂತರ **12** ಅಡಿ ರಸ್ತೆ ಇರುತ್ತದೆಂದು ನನಗೆ ಹೇಳಲಾಗುವುದಿಲ್ಲ. ನಮ್ಮ ಊರಿನ ರಸ್ತೆಗಳನ್ನು ಇ ಓ ರವರು ಸ್ಥಳ ಪರಿಶೀಲನೆ ಮಾಡಿ **8** ಅಡಿ ರಸ್ತೆಗಳು ಮಾತ್ರ ಇರುತ್ತವೆಂದು ವರದಿ ನೀಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿ ನನ್ನ ಸಂಬಂದಿ ಆದ್ದರಿಂದ ಅವರಿ ಸಹಾಯ ಮಾಡುವ ಸಲುವಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ರಸ್ತೆಯ ಬಗ್ಗೆ ನನಗೆ ಯಾವುದೇ ವಿಚಾರಗಳು ತಿಳಿದಿಲ್ಲ ಎಂದರೆ ಸರಿಯಲ್ಲ.

**ಮರು_ವಿಚಾರಣೆ_ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.